

ದರ್ಶನ್, ಸುದೀಪ್‌ಗೆ ಹೋಲಿಸಿದರೆ ಯಶ್ ಸಿನಿಮಾಗಳ ಸಂಖ್ಯೆ ಮತ್ತೂ ಕಡಿಮೆ. ಆರು ವರ್ಷಗಳ ಅವಧಿಯಲ್ಲಿ ಅವರ ನಟನೆಯ ಎರಡು ಸಿನಿಮಾಗಳಷ್ಟೇ ತೆರೆಕಂಡಿವೆ. 2018ರ 'ಕೆಜಿಎಫ್: ಚಾಪ್ಟರ್ 1' ಹಾಗೂ 2022ರ 'ಕೆಜಿಎಫ್: ಚಾಪ್ಟರ್ 2' ಸಿನಿಮಾಗಳು ತೆರೆಕಂಡು ದೊಡ್ಡ ಯಶಸ್ಸು ಗಳಿಸಿದವು. ಕನ್ನಡ ಸಿನಿಮಾದ ಮಾರುಕಟ್ಟೆಯನ್ನು ಈ ಸಿನಿಮಾಗಳು ಹಿಗ್ಗಲಿಸಿದವು ಎನ್ನುವ ಅಭಿಪ್ರಾಯಗಳೂ ವ್ಯಕ್ತವಾಗಿವೆ. ಆದರೆ, ಕನ್ನಡ ಚಿತ್ರರಂಗದ ಇಂದಿನ ಸ್ಥಿತಿಗತಿ ನೋಡಿದರೆ, 'ಪ್ಯಾನ್ ಇಂಡಿಯಾ' ಖ್ಯಾತಿಯ ಸಿನಿಮಾಗಳಿಂದ ವಿಸ್ತರಣೆಗೊಂಡಿದ್ದು ಆ ಸಿನಿಮಾಗಳ ನಿರ್ಮಾಣ ಸಂಸ್ಥೆಗಳೇ ಹೊರತು, ಚಿತ್ರೋದ್ಯಮವಲ್ಲ. 'ಪ್ಯಾನ್ ಇಂಡಿಯಾ' ಹೆಸರಿನ ಸಿನಿಮಾಗಳು ಕನ್ನಡ ಚಿತ್ರೋದ್ಯಮದ ಪಾಲಿಗೆ ಉಳಿಸಿರುವುದು ತಬ್ಬಿಬ್ಬುಗೊಳಿಸುವ ಮಬ್ಬನ್ನಷ್ಟೇ!

ಮೊದಲ ಮೂವರಿಗೆ ಹೋಲಿಸಿದರೆ ಶಿವರಾಜ್‌ಕುಮಾರ್ ಹೆಚ್ಚು ಕ್ರಿಯಾಶೀಲವಾಗಿರುವ ಕಲಾವಿದ. ಮೂರು ವರ್ಷಗಳ ಅವಧಿಯಲ್ಲಿ ತೆರೆಕಂಡಿರುವ ಅವರ ಸಿನಿಮಾಗಳ ಸಂಖ್ಯೆ ನಾಲ್ಕು. ಅತಿಥಿ ಕಲಾವಿದರಾಗಿ ನಟಿಸಿದ ಸಿನಿಮಾಗಳು ಎರಡು. 2021ರಲ್ಲಿ 'ಭಜರಂಗಿ 2', 2022ರಲ್ಲಿ 'ಬೈರಾಗಿ', 'ವೇದ', 2023ರಲ್ಲಿ 'ಘೋಸ್ಟ್' ಸಿನಿಮಾಗಳು ತೆರೆಕಂಡವು. ಅತಿಥಿ ಕಲಾವಿದನಾಗಿ ನಟಿಸಿದ 'ಜೈಲರ್' ಹಾಗೂ 'ಕಬ್ಜ' ಚಿತ್ರಗಳನ್ನು ಲೆಕ್ಕಕ್ಕೆ ಹಿಡಿದರೆ 2023ರಲ್ಲಿ ವರ್ಷದುದ್ದಕ್ಕೂ ಸುದ್ದಿಯಲ್ಲಿದ್ದ ನಟ ಶಿವರಾಜ್‌ಕುಮಾರ್. ನಾಯಕನಾಗಿ ನಟಿಸಿದ ಎಲ್ಲ ಸಿನಿಮಾಗಳೂ ನಿರ್ಮಾಪಕರಿಗೆ ಕೈ ಕಚ್ಚಿದಂತಿಲ್ಲ.

ತಾರಾ ವರ್ಚಸ್ಸಿನ ನಾಲ್ವರು ನಟರ ಕುರಿತ ಟಿಪ್ಪಣಿಗಳ ನಂತರ, 2023ರಲ್ಲಿ ತೆರೆಕಂಡ ಈ ಕಲಾವಿದರ ಸಿನಿಮಾಗಳನ್ನು ಲೆಕ್ಕಕ್ಕೆ ಹಿಡಿದರೆ, ಕಣ್ಣಮುಂದೆ ಬರುವುದು ಎರಡು ಪೂರ್ಣ ಪ್ರಮಾಣದ ಸಿನಿಮಾಗಳು ಹಾಗೂ ಮತ್ತೆರಡು ಗೆಸ್ಟ್ ಅಪಿಯರೆನ್ಸ್‌ನ ಸಿನಿಮಾಗಳು. ಈ ಎರಡು ಚಿತ್ರಗಳು ಹಾಗೂ ಉಳಿದ ಬೈಟು ಸಿನಿಮಾಗಳಲ್ಲಿ ಭರ್ಜರಿ ಗೆಲುವು ಎನ್ನುವುದು ಯಾವ ಸಿನಿಮಾಕ್ಕೂ ದೊರೆತಿಲ್ಲ. ಈ ಫಲಾಫಲವೇ, ಕನ್ನಡ ಚಿತ್ರರಂಗದ ಸ್ಥಿತಿ 2023ರಲ್ಲಿ ಹೇಗಿತ್ತು ಎನ್ನುವುದನ್ನು ಹೇಳುವಂತಿದೆ. ತಾರಾ ವರ್ಚಸ್ಸಿನ ನಟರಿಗೆ ಸಿನಿಮಾ ಎನ್ನುವುದು ಉದ್ಯೋಗವಾಗದೆ ಹವ್ಯಾಸವಾಗಿ ಪರಿಣಮಿಸಿದರೆ, ಚಿತ್ರೋದ್ಯಮದ ಅಸ್ತಿಭಾರ ಕಂಪಿಸದಿರುವುದೆ?

### ಹಿಂದಿರುಗಿ ನೋಡಿದಾಗ...

ಜನಪ್ರಿಯ ನಟರ ಚಿತ್ರಗಳು ಚಿತ್ರೋದ್ಯಮವನ್ನು ಯಾವ ರೀತಿ ಪೊರೆಯಬಲ್ಲವು ಎನ್ನುವುದಕ್ಕೆ ಕನ್ನಡ ಚಿತ್ರರಂಗದಲ್ಲೇ ಸಾಕಷ್ಟು ಉದಾಹರಣೆಗಳನ್ನು ಗಮನಿಸಬಹುದು.







## ಶೆಟ್ಟಿತ್ರಯರ ಮಂಗಳೂರು ಗ್ಯಾಂಗ್

ರಾಜ್‌ಕುಮಾರ್, ಕಲ್ಯಾಣ್‌ಕುಮಾರ್ ಹಾಗೂ ಉದಯ್‌ಕುಮಾರ್ ಅವರನ್ನು 'ಕುಮಾರತ್ರಯರು' ಎಂದು ಕನ್ನಡ ಸಿನಿಮಾ ಇತಿಹಾಸದಲ್ಲಿ ಗುರ್ತಿಸುವುದು ರೂಢಿ. ಅಂಥದೊಂದು ಸಮೀಕರಣ, 'ಶೆಟ್ಟಿತ್ರಯ'ರದು. ಕರಾವಳಿಯ ರಕ್ಷಿತ್ ಶೆಟ್ಟಿ, ರಿಷಬ್ ಶೆಟ್ಟಿ ಹಾಗೂ ರಾಜ್ ಬಿ. ಶೆಟ್ಟಿಯೇ ಈ ಶೆಟ್ಟಿತ್ರಯರು. ಕನ್ನಡ ಚಿತ್ರರಂಗವನ್ನು ಈ ಮೂವರು ಶೆಟ್ಟರು ನಿಯಂತ್ರಿಸುತ್ತಿದ್ದಾರೆ ಎಂದು ಕೆಲವರು ಗೊಣಗುವ ಮಟ್ಟಿಗೆ ಮಂಗಳೂರು ಗ್ಯಾಂಗ್ ಸಕ್ರಿಯವಾಗಿದೆ. ಶೆಟ್ಟಿ ಮಿತ್ರರ ಸಿನಿಮಾಗಳು ಯಶಸ್ಸಿನ ದೃಷ್ಟಿಯಿಂದಲೂ ಗಮನಸೆಳೆಯುತ್ತಿವೆ. 'ಕಾಂತಾರ'ದ ಬಹುದೊಡ್ಡ ಯಶಸ್ಸಿನಿಂದ ರಿಷಬ್ ಕನ್ನಡ ಚಿತ್ರರಂಗದ ಕಣ್ಮಣಿಯಾಗಿದ್ದಾರೆ. ಇತ್ತೀಚೆಗಷ್ಟೇ ಮುಹೂರ್ತ ನಡೆದ 'ಕಾಂತಾರ'ದ ಮುಂದುವರಿಕೆಯ ಸಿನಿಮಾ ಸುದ್ದಿಗೆ ರಾಷ್ಟ್ರೀಯ ಪತ್ರಿಕೆಗಳಲ್ಲೂ ಅವಕಾಶ ದೊರೆತಿದೆ.

2022ರಲ್ಲಿ ರಕ್ಷಿತ್‌ರ '777 ಚಾರ್ಲಿ' ತೆರೆಕಂಡು ಯಶಸ್ಸು ಗಳಿಸಿತ್ತು. 2023ರಲ್ಲಿ ರಕ್ಷಿತ್ ನಟನೆಯ ಎರಡು ಸಿನಿಮಾಗಳು – 'ಸಪ್ತ ಸಾಗರದಾಚೆ ಎಲ್ಲೋ' ಸೈಡ್–ಎ ಮತ್ತು ಸೈಡ್–ಬಿ ತೆರೆಕಂಡಿವೆ. ಯಶಸ್ಸು ಆಹಾ ಅನ್ನುವಂತಿಲ್ಲವಾದರೂ, ರಕ್ಷಿತ್‌ರ ವರ್ಚಸ್ಸನ್ನು ಈ ಸಿನಿಮಾಗಳು ಹೆಚ್ಚಿಸುವಂತಿವೆ. ರಾಜ್ ಬಿ. ಶೆಟ್ಟಿ ನಟನೆಯ 'ಟೋಬಿ' ಗೆಲ್ಲದೆ ಹೋದರೂ, 'ಸ್ವಾತಿ ಮುತ್ತಿನ ಮಳೆ ಹನಿಯೆ' ನಿರ್ದೇಶಕರಾಗಿ ರಾಜ್‌ಗೆ ಹೆಸರು ತಂದುಕೊಟ್ಟಿದೆ.